ಶ್ರೀ ಕೆ. ಹೆಚ್. ರಂಗನಾಥ್.—ಹಾಸನದಲ್ಲಿ 1673 ಎಕರೆ 4 ಗುಂಟೆ ಶಿವಮೊಗ್ಗದಲ್ಲಿ 820 ಎಕರೆ 24 ಗುಂಟೆ ಇಷ್ಟು ಜಮೀನು ವಿತರಣೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಅಲ್ಲಿ ಸತ್ಯಾಗ್ರಹ ಮಾಡಿ ಯಾರು ಯಾರು ಅರ್ಜಿ ಕೊಟ್ಟಿದ್ದರೋ ಅವರಿಗೆ ಈ ಜಮೀನು ಸ್ಯಾಂಕ್ಷನ್ ಆಗಿದೆಯೇ?

ಶ್ರೀ ಹೆಚ್. ವಿ. ಕೌಜಲಗಿ.—ಎಲ್ಲಿ ಸತ್ಯಾಗ್ರಹ ಮಾಡಿದರೋ ಯಾವ ಸತ್ಯಾಗ್ರಹಿಗೆ ಕೊಟ್ಟರೋ ನನಗೆ ಗೊತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಅರಕೇರಿಯವರ ಪ್ರಶ್ನೆ ನಂ. 484. ಮಾನ್ಯ ಜಯಪ್ರಕಾಶ ನಾರಾಯಣ ಅವರು ಹಾಕಲು ನಾನು ಅನುಮತಿ ಕೊಟ್ಟಿದ್ದೇನೆ.

Shifting of Timber Yards Located in Bijapur City

484. Sri M. H. JAYAPRAKASH NARAYAN (Sirsi) [On behalf of SRI S. S. ARAKERI (Balloli)].—

Will the Minister of State for Municipal Administration be pleased to state.—

(*a*) whether the inconvenience caused to the people by the location of timber yards in the City of Bijapur has come to the notice of the Government ;

(*b*) the number of such timber yards located in the City ?

Sri B. M. PATIL (Minister of State for Municipal Administration).—

(*a*) Yes.

(*b*) Seven Saw Mills and Four Timber Depots.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಬಿಜಾಪುರ ನಗರದಲ್ಲಿ ವಾಸಿಸುವ ಮನೆಗಳ ಮಧ್ಯೆ ಟಿಂಬರ್ ಯಾರ್ಡ್ ಇದೆ. ಅವರ ಬಗ್ಗೆ ಅನೇಕ ಪತ್ರಗಳನ್ನು ಬರೆದಿದ್ದೇವೆ. ಆದುದರಿಂದ ಇದನ್ನು ಊರಿನ ಹೊರಗೆ ಜಾಗ್ರತೆ ವರ್ಗಾಯಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

† ಶ್ರೀ ಬಿ. ಎಂ. ಪಾಟೀಲ್.—ಅಲ್ಲಿ ಟಿಂಬರ್ ಯಾರ್ಡ್ ವಾಸಿಸುವ ಮನೆಗಳ ಮಧ್ಯೆ ಇರುವುದರಿಂದ ಅನೇಕರಿಗೆ ತೊಂದರೆಯಾಗುತ್ತದೆ ಅನ್ನುವುದು ನಿಜ. ಅದನ್ನು ಊರ ಹೊರಗೆ ಹಾಕಲಿಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಅನೇಕ ಪತ್ರಗಳನ್ನು ಬರೆದಿದ್ದೇವೆ ಎಂದು ಹೇಳಿದ್ದಾರೆ. ಅವರು ಯಾವ ಪತ್ರವನ್ನೂ ಬರೆದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಶ್ರೀಮಾನ್ ಅರಕೆರೆಯವರು ಪತ್ರವನ್ನು ಮಾನ್ಯ ಮಂತ್ರಿಗಳಿಗೆ ಬರೆದಿದ್ದಾರೆ. ಅದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಅದು ಯಾವ ಮಟ್ಟದಲ್ಲಿದೆ ಎಂದು ಹೇಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಇದನ್ನು ಪರಿಶೀಲಿಸುತ್ತಾ ಇದ್ದೇವೆ.

Slums in Bangalore City

510. Sri T. R. SHAMANNA (Fort).—

Will the Minister of State for Municipal Administration be pleased to state :—

(*a*) the number of slums in Bangalore City ;

(*b*) the number of slums cleared for the last 3 years up to a latest convenient date ;

(*c*) steps taken to remove, improve or regularise the existing slums ;

(*d*) the number of slums that will be improved or removed during the Gandhi Centenary year ?

Sri B. M. PATIL (Minister of State for Municipal Administration).–

(*a*) 93.

(*b*) 12.

(*c*) As and when the new layouts are formed the City Improvement Trust Board, hands over certain number of sites to the Corporation for rehabilitating the Slum Dwellers. The Corporation has taken steps to regularise some of the slums existing on Corporation lands, by providing the required civic amenities such as formation of roads, improvement to the roads, drains, street lights, etc.

(*d*) To be removed	...	3
To be improved or regularised	...	7

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ಈಗ ತಾವು ಕೊಟ್ಟಿರುವ ಪಟ್ಟಿಯಲ್ಲಿ ಬೆಂಗಳೂರಿನಲ್ಲಿ 93 ಸ್ಲಮ್ಸ್ ಇವೆ. ಇವುಗಳ ಪೈಕಿ 12 ಸ್ಲಮ್ಸ್‌ನ್ನು ತೆಗೆದಿದ್ದೇವೆ ಎಂದು ಹೇಳಿದ್ದೀರಿ. ಹಾಗಾದರೆ ವರ್ಷಕ್ಕೆ 4 ಸ್ಲಮ್ಸ್‌ನ್ನು ಕ್ಲಿಯರ್ ಮಾಡಿದ ಹಾಗಾಯಿತು. ಆದುದರಿಂದ ಈ ಸ್ಲಮ್ಸ್‌ನ್ನು ಕ್ಲಿಯರ್ ಮಾಡಬೇಕಾದರೆ ಇನ್ನೂ 25 ವರ್ಷ ಆಗಬಹುದು ಎಂದು ಇಟ್ಟುಕೊಳ್ಳೋಣವೇ ಅಥವಾ ಶೀಘ್ರವಾಗಿ ಏನಾದರೂ ಕಾರ್ಯಕ್ರಮ ತೆಗೆದುಕೊಂಡು ಈ ಸ್ಲಮ್ಸ್‌ನ್ನು ನಿವಾರಣೆ ಮಾಡುತ್ತೀರಾ ! ಇದನ್ನು ಎಷ್ಟು ವರ್ಷದಲ್ಲಿ ಕ್ಲಿಯರ್ ಮಾಡುತ್ತೀರಿ ಎಂದು ಏನಾದರೂ ಭರವಸೆ ಕೊಡುತ್ತೀರಾ ?

†ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರಾದ ಶಾಮಣ್ಣನವರು ಮಾತನಾಡಿದ ಹಾಗೆ ಕೊಳಚೆ ಪ್ರದೇಶ ನಿರ್ಮೂಲನದ ಬಗ್ಗೆ ನಮ್ಮ ಸಾಧನೆ ಅಷ್ಟೊಂದು ಪ್ರಗತಿದಾಯಕವಾಗಿಲ್ಲ. ಇದು ಬೃಹತ್ ಸಮಸ್ಯೆ. ಕಾರ್ಪೊರೇಷನ್, ಟ್ರಸ್ಟ್‌ಬೋರ್ಡ್ ಮತ್ತು ಸರ್ಕಾರ ಎಷ್ಟರಮಟ್ಟಿಗೆ ಸಹಾಯ ಮಾಡಲಿಕ್ಕೆ ಸಾಧ್ಯವಿದೆ ಎಂಬ ಪ್ರಶ್ನೆ ಇದೆ. ಸರ್ಕಾರದ ಸಂಪನ್ಮೂಲಗಳಿಗೂ ಮಿತಿ ಇದೆ. ಹಾಗೂ ಕಾರ್ಪೊರೇಷನ್‌ಗಳಿಗೆ ಅವುಗಳ ಸಂಪನ್ಮೂಲಗಳಿಗೂ ಮಿತಿ ಇದೆ ಮತ್ತು ಟ್ರಸ್ಟ್ ಬೋರ್ಡ್ ಸಂಪನ್ಮೂಲಗಳಿಗೂ ಮಿತಿ ಇದೆ. ನನಗೆ ತಿಳಿದಹಾಗೆ ಅರ್ಬನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಬೇಕು ಎಂಬ ಅಭಿಪ್ರಾಯ ಇದೆ. ಕೇಂದ್ರ ಸರ್ಕಾರದವರು ರಿವಾಲ್ವಿಂಗ್ ಫಂಡ್ ಫಾರ್ ಅರ್ಬನ್ ಡೆವಲಪ್‌ಮೆಂಟ್ ಎಂಬ ಯೋಜನೆಯನ್ನು ಕಾರ್ಯಗತ ಮಾಡಲಿಕ್ಕೆ ನಿರ್ಧಾರ ಮಾಡಿದ್ದಾರೆ. ಆದ್ದರಿಂದ ಅದರಲ್ಲಿ ಎಷ್ಟರಮಟ್ಟಿಗೆ ನಹಾಯ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ತಿಳಿದುಕೊಂಡು ಆ ಅರ್ಬನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆದಮೇಲೆ ಅವರು ಎಷ್ಟು ಹಣವನ್ನು ಒದಗಿಸುತ್ತಾರೆ ಎಂದು ತಿಳಿದುಕೊಂಡು ಇದನ್ನು ಇನ್ನೂ ಕಚ್ಚು ಹೆಚ್ಚಾಗಿ ಮುಂದುವರಿನಬಹುದು ಎಂದು ನನಗೆ ಅನಿಸುತ್ತದೆ.

Sri T. R. SHAMANNA.—In place of the old slums, new slums are springing up. The new places have again become slums. New slums are being created. Is the Minister aware of that ? If so, what steps are being taken to see that slums are kept in a better condition and new slums are not created ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಇದರ ಬಗ್ಗೆ ನನ್ನ ಜೊತೆಯಲ್ಲಿ ಚರ್ಚಿಸಿದರೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಸ್ಲಮ್ಸ್ ಕ್ಲಿಯರ್ ಅನ್ನುವುದು ಒಂದು ದೊಡ್ಡ ಪ್ರಶ್ನೆ. ಈ ಸ್ಲಮ್ಸ್ ಇರುವ ಕಡೆ ರಿಹ್ಯಾಬಿಲಿಟೇಟ್ ಮಾಡಿ ಅವರ ಪರಿಸ್ಥಿತಿ ಸುಧಾರಿಸಬೇಕು ಅನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಎಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲ ಅಲ್ಲಿ ರೋಡ್ಸ್ ಡೈವಿನೇಜ್ ಲೈಟ್ ಕೊಡಬೇಕು. ಅದನ್ನೆಲ್ಲಾ ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಆರ್. ದಯಾನಂದಸಾಗರ್.—ಈಗ 12 ಸ್ಲಮ್ಸ್ ಕ್ಲಿಯರ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ನನಗೆ ಗೊತ್ತಿದ್ದ ಹಾಗೆ ಒಂದೂ ಸ್ಲಮ್ ಕ್ಲಿಯರ್ ಆದಹಾಗೆ ಇಲ್ಲ. ಈ ಸ್ಲಮ್ಸ್ ಕ್ಲಿಯರೆನ್ಸ್ ಬಗ್ಗೆ ನಿಮ್ಮ ಹತ್ತಿರ ಏನಾದರೂ ಕಾಂಕ್ರೀಟ್ ಪ್ರೂಫ್ಸ್ ಇದೆಯೇ ? ಇದಕ್ಕೆ ಎಷ್ಟು ಜೋಡಿಸಿ ಇಟ್ಟಿದ್ದೀರಿ ? ಮದ್ರಾಸ್‌ನಲ್ಲಿ 7 ವರ್ಷದ ಸ್ಕೀಂ ಮಾಡಿ ಸ್ಲಮ್ಸ್‌ನ್ನು ಕ್ಲಿಯರ್ ಮಾಡುವ ಹಾಗೆ ಸಹಾನುಭೂತಿ, ಮಾನವೀಯತೆ ದೃಷ್ಟಿಯಿಂದ ಕೆಲಸ ಪ್ರಾರಂಭ ಮಾಡಿದರು. ಅದರಂತೆ ನಮ್ಮ ಸರ್ಕಾರಕ್ಕೆ ಮಾನವೀಯತೆ ಇದೆಯೇ ಅದಕ್ಕೋಸ್ಕರ ಏನಾದರೂ ಕಾಂಕ್ರೀಟ್ ಪ್ರೂಫ್ಸ್ ಇದೆಯೇ ! ಎಷ್ಟು ಹಣ ಇಟ್ಟಿದ್ದೀರಿ ? ಅಥವಾ ನಮ್ಮನೆ ನಾಟಕ ಮಾಡಿಕೊಂಡು ಜನಗಳಿಗೆ, ರಾಷ್ಟ್ರಕ್ಕೆ, ರಾಜ್ಯಕ್ಕೆ ಮೋಸ ಮಾಡುತ್ತಿದ್ದೀರಾ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಮಿತ್ರರು ಈ ಪ್ರಶ್ನೆಯನ್ನು ಕೇಳಿದ್ದಾರೆ. ಅವರು ಒಂದು ಕಾಲಕ್ಕೆ ನಗರ ಕಾರ್ಪೋರೇಷನ್‌ನಲ್ಲಿ ಇದ್ದರು. ಅವರು ಸರ್ಕಾರದಲ್ಲೂ ಇದ್ದರು. ಅವಾಗಿನಿಂದ ಈವೊತ್ತಿನವರೆಗೂ ಆ ಸ್ಲಮ್ಸ್ ಬೆಳೆದುಕೊಂಡು ಬಂದಿವೆ. ಅದಕ್ಕೆ ಕಾಂಕ್ರೀಟ್ ಪ್ರೂಫ್ಸ್ ಇದೆಯೇ ಎಂದು ಕೇಳಿದ್ದಾರೆ. ಅದಕ್ಕೆ ದುಡ್ಡು ಬೇಕು. ಆವಾಗ ಈ ಕಾರ್ಯಕ್ರಮ ಹಾಕಿಕೊಳ್ಳಬಹುದು. ದುಡ್ಡು ಸಿಕ್ಕಿದ ನಂತರ ಈ ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಒಂದು ಸ್ಕೀಮನ್ನು ಯೋಚನೆ ಮಾಡಬಹುದು. ಯಾವರೀತಿಯಿಂದ ಹಣ ಒದಗಿಸಬೇಕು ಎಂದು ಯೋಚನೆ ಮಾಡಿ ಹಣ ಸಿಕ್ಕಿದ ನಂತರ ಈ ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಅವರ ನಿರೀಕ್ಷೆಯ ಗಳನ್ನು ಬಿಡಿಸಲು ನಿಶ್ಚಿತವಾಗಿ ಪ್ರಯತ್ನ ಮಾಡುತ್ತೇವೆ.

12-30 P.M.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಕಡೆ ಒಂದು ಸ್ಲಂ ಇದ್ದರೆ ಅದನ್ನು ತೆಗೆಯುವಾಗ ಇಲ್ಲಿರುವ ಜನಕ್ಕೆ ಯಾವ ತಿಳುವಳಿಕೆಯೂ ಕೊಡದೇ ಕಾರ್ಪೋರೇಷನ್‌ನವರು ಪೋಲೀಸಿನವರ ಸಹಾಯದಿಂದ ತೆಗೆಯುತ್ತಾರೆ. ಇನ್ನೊಂದು ಕಡೆ ಇರುವ ಸ್ಲಂಗಳಿಗೆ ಬೇರೆ ನಿವೇಶನ ಕೊಟ್ಟು ಅಲ್ಲಿಗೆ ಅವರನ್ನು ಬದಲಾಯಿಸುವಂತೆ ಮಾಡುವುದು ಒಂದು ರೀತಿ ಇದೆ. ಇದರಲ್ಲಿ ನರಕಾರದ ಫೋರಣ್ ಎನ್ನುವುದನ್ನು ಸ್ಪಷ್ಟವಾಗಿ ಹೇಳುವುದಕ್ಕಾಗುತ್ತದೆಯೇ ? ನಾನು ತಿಳಿದಂತೆ ಪೊದಲನ ಆರೋಪಣೆಗಳೇ ನಿಮ್ಮ ಮೇಲೆ ಇದೆ ಎಂದು ಹೇಳುತ್ತೇನೆ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ತಿಳಿಸುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಹೇಳುವ ಹಾಗೆ ಕೆಲವು ಕಡೆ ಅನ್‌ಆಥರೈಸ್ಡ್ ಸ್ಲಂಸ್ ಇರುತ್ತವೆ ಮತ್ತೆ ಕೆಲವು ಕಡೆ ಇರುವ ಸ್ಲಂಸ್‌ಗಳು ಪ್ರೈವೇಟು ಲ್ಯಾಂಡುಗಳಲ್ಲಿರುತ್ತವೆ. ಮತ್ತು ಕಾರ್ಪೋರೇಷನ್ ಜಾಗವಲ್ಲಿ ಕೆಲವು ಸ್ಲಂಸ್‌ಗಳೂ ಇರುತ್ತವೆ. ಇದೂ ಅಲ್ಲದೆ ಎಷ್ಟೋ ಜನ ಹೊರಗಡೆಯಿಂದ ಬಂದವರು ಒಂದೇ ರಾತ್ರಿಯೊಳಗೆ ಒಂದು ಕಡೆ ಗುಡಿಸಲು ಹಾಕಿಕೊಂಡು ನಿಂತು ಬಿಡುತ್ತಾರೆ, ಇದರಲ್ಲಿ ಕಾರ್ಪೋರೇಷನ್ ಲ್ಯಾಂಡುಗಳಲ್ಲಿ ಸುಮಾರು ಹತ್ತು ಹದಿನೈದು ವರ್ಷಗಳಿಂದ ಇರುವವರಲ್ಲಿ ಕೆಲವರಿಗೆ ಬೇರೆ ಕಡೆ ಜಾಗ ಕೊಡಬಹುದು. ಎಲ್ಲರಿಗೂ ಜಾಗ ಕೊಡಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಸ್ಲಂಸ್ ಕ್ಲಿಯರೆನ್ಸ್ ಸಮಸ್ಯೆಯನ್ನು ಇನ್ನೂ ಬಿಡಿಸಲು ಸಾಧ್ಯವಾಗಿಲ್ಲ. ಇದಕ್ಕಾಗಿ ಕಾರ್ಪೋರೇಷನ್ನಿನವರು ಟ್ರಸ್ಟ್ ಬೋರ್ಡಿನವರು ಹಾಗೂ ಸರಕಾರದವರು ಮಾನವೀಯತೆಯ ದೃಷ್ಟಿಯಿಂದ ಮತ್ತು ಸಹಾನುಭೂತಿಯಿಂದ ಈ ಪ್ರಶ್ನೆಯನ್ನು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಕೆ. ಪ್ರಭಾಕರ್.—ಹಣ ಒದಗಿಸಿಕೊಂಡು ಯೋಜನೆ ಮಾಡುತ್ತೇವೆಂದು ಹೇಳಿದಿರಿ. ಎಷ್ಟು ಹಣವನ್ನು ಯೋಜನೆಗಾಗಿ ಇದುವರೆಗೆ ಒದಗಿಸಿದ್ದೀರಿ ? ಎಷ್ಟೋ ಕಡೆ ಟ್ರಸ್ಟ್ ಬೋರ್ಡುಗಳವರು ಸ್ಲಂ ಕ್ಲಿಯರೆನ್ಸ್‌ಗಾಗಿ ಸೈಟುಗಳನ್ನು ಮೀಸಲಾಗಿಡುತ್ತಾರೆಂದು ಇತ್ತು. ಎಷ್ಟು ಸೈಟುಗಳನ್ನು ಸ್ಲಂನವರಿಗಾಗಿ ಎಷ್ಟು ವರ್ಷಗಳಲ್ಲಿ ಕೊಡಲಾಗಿದೆ ಹೇಳಲು ಸಾಧ್ಯವೇ ?

ಶ್ರೀ ಬಿ. ಎಂ. ಪಾಟೀಲ್.—ನಾನಾಗಲೇ ಹೇಳಿದ ಹಾಗೆ ಜೇತದ ನಂಪನ್ಮೂಲಗಳನ್ನು ನೋಡಿಕೊಂಡು ಕೆಲನ ಮಾಡಬೇಕಾಗಿದೆ. ಹೊನ ಹೊನ ಲೇ ಔಟುಗಳನ್ನು ಮಾಡುವಾಗ ಇಂತಿಷ್ಟು ಸೈಟುಗಳನ್ನು ನ್ಲಂ ಕ್ಲಿಯರೆನ್ಸ್ ಮಾಡಿದಾಗ ಅವರಿಗೆ ಕೊಡಬೇಕೆಂದು ಕೆಲವು ಸೈಟು ಗಳನ್ನು ಕೆಲವು ಕಡೆಗಳಲ್ಲಿ ಪ್ರಯತ್ನ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಶ್ರೀ ವಿ. ಎಲ್. ಶಿವಪ್ಪನವರ ಪ್ರಶ್ನೆ ನಂ. 475 ಶ್ರೀ ಎಂ. ನಾಗಪ್ಪನವರು ಹಾಕಬಹುದು.

Transfer of Inspector of Schools, Tiptur.

605. Sri M. NAGAPPA (Raichur) [On behalf of SRI V. L. SHIVAPPA Tiptur)].—

Will the Minister for Education be pleased to state:—

(*a*) whether a complaint was given against the Inspector of Schools, Tiptur one year ago and again more recently;

(*b*) whether it is a fact that the Inspector of Schools is in Tiptur Town for over 4 years and he is a local person;

(*c*) whether any action has been taken so far, if not, the cause for the dely ?

Sri K. V. SHANKARA GOWDA (Minister for Education).—

(*a*) Yes.

(*b*) Yes.

(*c*) The Director of Public Instruction has instructed the Deputy Director of Public Instruction, Bangalore Division to transfer the concerned Inspector of Schools, Tiptur, out of Tiptur during the general transfers.

ಶ್ರೀ ಎಂ. ನಾಗಪ್ಪ.—ದೂರು ಬಂದಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಅವು ಯಾವ ಯಾವುದು ಎನ್ನುವುದು ತಿಳಿನರಾಗುತ್ತದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಸೈಕಲ್ ಅಡ್ವಾನ್ಸ್ ಹಣವನ್ನು ಡಿಸ್‌ಪರ್ಸ್ ಮಾಡಲ್ಲಿಲ್ಲ ಎನ್ನುವುದರ ಮೇಲೆ ದೂರು ಕೊಟ್ಟಿದ್ದರು.

ಶ್ರೀ ಎಂ. ನಾಗಪ್ಪ.—ದೂರಿನಲ್ಲಿ ಕೇರ್ ನಂಸ್ಥೆಯಿಂದ ಬರತಕ್ಕ ವಸ್ತುಗಳನ್ನೂ ನರಿಯಾಗಿ ಹಂಚಲಿಲ್ಲ ಎನ್ನತಕ್ಕದ್ದು ಮತ್ತು ಕೆಲವು ಉಪಾಧ್ಯಾಯರುಗಳನ್ನು ನರಿಯಾಗಿ ನೋಡುತ್ತಿರಲಿಲ್ಲ ಎನ್ನುವ ದೂರುಗಳೂ ಇರಲಿಲ್ಲವೆ ?

ಶ್ರೀ ಕೆ. ವಿ. ಶಂಕರಗೌಡ.—ಆ ದೂರುಗಳೂ ಇವೆ. ಆದರೆ ಇವನ್ನೆಲ್ಲಾ ವಿಚಾರಣೆ ಮಾಡಿದಾಗ ಯಾವ ದೂರುಗಳೂ ಸಾಬೀತಾಗಲಿಲ್ಲ ಎಂದು ಕಂಡುಬಂದಿದೆ.

ಶ್ರೀ ಎಂ. ನಾಗಪ್ಪ.—ಇದರ ಬಗ್ಗೆ ಜನರಲ್ ಟ್ರಾನ್ಸ್‌ಫರು ಮಾಡುವಾಗ ಇವರನ್ನೂ ಟ್ರಾನ್ಸ್‌ಫರ್ ಮಾಡುವುದನ್ನು ಯೋಚಿನರಾಗುತ್ತದೆ ಎಂದು ಹೇಳಿದೆ. ಇವರ ಬಗ್ಗೆ ತನಿಖೆ ಮಾಡಿದ ರಿಪೋರ್ಟ್‌ನ್ನು ಈ ಸಭೆಯ ಮುಂದೆ ಇಡಲು ಆಗುತ್ತದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಸಭೆಯ ಮುಂದೆ ಇಡುವುದಕ್ಕೆ ಆಗುವುದಿಲ್ಲ.